**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆಯ ನಡವಳಿಗಳು**

ವಿಷಯ: ನ್ಯಾಕ್ ಪ್ರಕ್ರಿಯೆಗೆ ಒಳಪಡುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಅನುದಾನ ಬಿಡುಗಡೆ ಆದೇಶ ಸಂಖ್ಯೆ ಇಡಿ/65/ಹೆಚ್‌ಪಿಸಿ/2021, ಬೆಂಗಳೂರು ದಿನಾಂಕ: 17-04-2021 ಮತ್ತು 08.07.2021
2. ಈ ಕಛೇರಿ ಸಮ ಸಂಖ್ಯೆ ದಿನಾಂಕ: 22.06.2021

**********

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ನ್ಯಾಕ್ ಮೌಲ್ಯಮಾಪನ/ ಮರುಮೌಲ್ಯಮಾಪನಕ್ಕೆ ಒಳಪಡುವುದು ಕಡ್ಡಾಯವಿರುವ ಹಿನ್ನೆಲೆಯಲ್ಲಿ ಮಾನ್ಯತೆ ಪ್ರಕ್ರಿಯೆಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಬಿಡುಗಡೆ ಮಾಡಲು ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ, 2021-22 ರ ಸಾಲಿನಲ್ಲಿ **"ರಾಷ್ಟ್ರೀಯ ಅಂಗೀಕೃತ ಪರಿಷತ್ತು"** ಕಾರ್ಯಕ್ರಮದಡಿ, ಲೆಕ್ಕಶೀರ್ಷಿಕೆ: **2202-03-112-0-09-059** ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಐ.ಐ.ಕ್ಯೂ.ಎ. ಎಸ್.ಎಸ್.ಆರ್.ಶುಲ್ಕ, ಮೌಲ್ಯಮಾಪನ ಶುಲ್ಕ ಮತ್ತು ಪೀರ್ ತಂಡದ ಭೇಟಿ ವೆಚ್ಚಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/01/ನ್ಯಾಕ್.ಅನುದಾನ/2021-22, ಬೆಂಗಳೂರು ದಿ: 18.08.2021**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ನ್ಯಾಕ್ ಮೌಲ್ಯಮಾಪನ ಪ್ರಕ್ರಿಯೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ **"ರಾಷ್ಟ್ರೀಯ ಅಂಗೀಕೃತ ಪರಿಷತ್ತು"** ಕಾರ್ಯಕ್ರಮದಡಿ ಲೆಕ್ಕಶೀರ್ಷಿಕೆ **2202-03-112-0-09-059** ರಡಿಯಲ್ಲಿ ರೂ.50 ಲಕ್ಷಗಳ ಅನುದಾನವು ಮಂಜೂರಾಗಿರುತ್ತದೆ. ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಕಂತಿನ ರೂ.25 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. ಸದರಿ ಅನುದಾನದ ಮಿತಿಯೊಳಗೆ ಉಲ್ಲೇಖ (2) ರ ಆದೇಶದಲ್ಲಿ ರೂ.11,23,500/-ಗಳ ಅನುದಾನವನ್ನು ನ್ಯಾಕ್ ಪ್ರಕ್ರಿಯೆಗೆ ಒಳಪಡುತ್ತಿರುವ 03 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಬಿಡುಗಡೆಮಾಡಿದ್ದು, ರೂ.13,76,500/- ಉಳಿಕೆ ಇರುತ್ತದೆ. ಪ್ರಸ್ತುತ ನ್ಯಾಕ್ ಪ್ರಕ್ರಿಯೆಗೆ ಒಳಪಡುತ್ತಿರುವ ಈ ಕೆಳಕಂಡ 04 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಐ.ಐ.ಕ್ಯೂ.ಎ. ಎಸ್.ಎಸ್.ಆರ್ ಶುಲ್ಕ, ಮೌಲ್ಯಮಾಪನ ಶುಲ್ಕ & ಪೀರ್ ತಂಡದ ಭೇಟಿ ವೆಚ್ಚಕ್ಕಾಗಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಾಸೂರು ಈ ಕಾಲೇಜು ಈಗಾಗಲೇ ನ್ಯಾಕ್ ಪ್ರಕ್ರಿಯೆಯನ್ನು ಪೂರೈಸಿದ್ದು, ಆ ಸಂದರ್ಭದಲ್ಲಿ ಸದರಿ ಕಾಲೇಜಿಗೆ ಬಿಡುಗಡೆ ಮಾಡಲಾಗಿದ್ದ ಅನುದಾನದ ಮೊತ್ತವನ್ನು ಸರ್ಕಾರವು ಹಿಂಪಡೆದಿದ್ದರಿಂದ, ಪೀರ್ ಟೀಮ್ ಭೇಟಿ ವೆಚ್ಚಕ್ಕಾಗಿ ಪ್ರಾಂಶುಪಾಲರ ಪಿ.ಡಿ. ಖಾತೆಯಿಂದ ಬಳಸಿದ ಮೊತ್ತ ರೂ.50,000/-ಗಳನ್ನು ಮರುಭರಿಕೆ ಮಾಡುವ ಷರತ್ತಿಗೊಳಪಟ್ಟು ಸಿಟಿಎಸ್-8 ಮುಖಾಂತರ ಸದರಿ ಕಾಲೇಜುಗಳ ನ್ಯಾಕ್/ಐ.ಕ್ಯೂ.ಎ.ಸಿ ಬ್ಯಾಂಕ್ ಖಾತೆಗೆ ಪಾವತಿಸುವ ಸಲುವಾಗಿ ಬಿಡುಗಡೆ ಮಾಡಲು ಆದೇಶಿಸಲಾಗಿದೆ.

..2..

Scanned with CamScanner

## ನ್ಯಾಕ್ ಮೌಲ್ಯಮಾಪನ/ಮರು ಮೌಲ್ಯಮಾಪನಕ್ಕೆ ಒಳಪಡುವ/ಒಳಪಟ್ಟಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪಟ್ಟಿ

(ರೂ.ಗಳಲ್ಲಿ)

| ಕ್ರ ಸಂ | ಕಾಲೇಜಿನ ಹೆಸರು | ಡಿ.ಡಿ.ಓ ಸಂಖ್ಯೆ/ ರೆಸಿಪಿಯಂಟ್ ಸಂಖ್ಯೆ | ಐ.ಐ.ಕ್ಯೂ.ಎ ಶುಲ್ಕ (ರೂ.ಗಳಲ್ಲಿ) | ಎಸ್.ಎಸ್.ಆರ್. ಶುಲ್ಕ (ರೂ.ಗಳಲ್ಲಿ) | ಪೀರ್ ತಂಡದ ಭೇಟಿ ವೆಚ್ಚ (ರೂ.ಗಳಲ್ಲಿ) | ಪೀರ್ ತಂಡದ ಭೇಟಿ ಪ್ರಯುಕ್ತ ವಾಹನ ಬಾಡಿಗೆ, ಶಿಷ್ಟಾಚಾರ, ಚಿತ್ರೀಕರಣ ಇತ್ಯಾದಿಗಳಿಗೆ (ರೂ.ಗಳಲ್ಲಿ) | ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಸರ್ಕಾರಿ ಆರ್.ಸಿ ವಾಣಿಜ್ಯ ಕಾಲೇಜು, ಬಸವೇಶ್ವರ ಸರ್ಕಲ್, ಬೆಂಗಳೂರು-560001. | 181250/ 1404352666 | 29500 | 118000 | 177000 | 50000 | **374500** |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಹಗಾಂವ್ ಕ್ರಾಸ್-585316 | 183230/ 1403231391 | 29500 | 118000 | 177000 | 50000 | **374500** |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾರ್ಕೂರು | 182740/ 1404384294 | 29500 | 118000 | 177000 | 50000 | **374500** |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಚ್.ಎಸ್.ಆರ್.ಲೇಔಟ್, ಸರ್ಜಾಪುರ, ಬೆಂಗಳೂರು. | 181120/ 1404410820 | 29500 | 118000 | *55500 | 0 | **203000** |
| 5 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಬಾಸೂರು, ಬ್ಯಾಡಗಿ ತಾ:-581120 | 182980/ 140438567 | 0 | 0 | 0 | 50000 | **50000** |
| | ಒಟ್ಟು | | **118000** | **472000** | **586500** | **200000** | **1376500** |

*ಕ್ರ.ಸಂಖ್ಯೆ 4 ರಲ್ಲಿನ ಸ.ಪ್ರ.ದ.ಕಾಲೇಜು, ಹೆಚ್.ಎಸ್.ಆರ್.ಲೇಔಟ್, ಸರ್ಜಾಪುರ, ಕಾಲೇಜಿಗೆ ಪೀರ್ ತಂಡದ ಭೇಟಿ ವೆಚ್ಚಕ್ಕಾಗಿ ರೂ.177000/- ರ ಬದಲಿಗೆ ರೂ. ೫೫೫೦೦/- ಗಳನ್ನು ಮಾತ್ರ ಬಿಡುಗಡೆ ಮಾಡುತ್ತಿದ್ದು, ಸರ್ಕಾರದಿಂದ 3ನೇ ಹಂತದ ಅನುದಾನ ಬಿಡುಗಡೆಯಾದ ನಂತರ ಉಳಿಕೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

<u>ಷರತ್ತುಗಳು:-</u>

1. ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ (ಕೆ.ಟಿ.ಪಿ.ಪಿ) ಮತ್ತು ಅದರಡಿಯಲ್ಲಿ ನಿಯಮಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2. ಈ ವೆಚ್ಚವನ್ನು ಮಾರ್ಚ್ 2022 ಮಾಹೆಯೊಳಗೆ ಎಲ್ಲಾ ಪ್ರಚಲಿತ ನಿಯಮಗಳನ್ನು ಪಾಲಿಸಿ ಭರಿಸುವುದು.
3. ಈ ಅನುದಾನವನ್ನು ನ್ಯಾಕ್ ಮೌಲ್ಯಮಾಪನ / ಮರುಮೌಲ್ಯಮಾಪನ ಪ್ರಕ್ರಿಯೆಗಳಿಗೆ ಮಾತ್ರ ಬಳಸತಕ್ಕದ್ದು.
4. **ಬಿಡುಗಡೆ ಮಾಡಲಾದ** ಅನುದಾನದ ಖರ್ಚು-ವೆಚ್ಚಗಳನ್ನು ಲೆಕ್ಕ ತಪಾಸಣೆಗೆ ಒಳಪಡಿಸತಕ್ಕದ್ದು.

...3..

Scanned with CamScanner

5. ಬಿಡುಗಡೆ ಮಾಡಲಾದ ಅನುದಾನದ ಬಳಕೆಯ ಬಗ್ಗೆ ಕರ್ನಾಟಕ ಆರ್ಥಿಕ ಸಂಹಿತೆ, ನಿಯಮ 161 ರನ್ವಯ ನಿಗದಿತ ನಮೂನೆಯಲ್ಲಿಯೇ "ಹಣ ಬಳಕೆಯ ಪ್ರಮಾಣ ಪತ್ರ" ಗಳನ್ನು ಸಿದ್ಧಪಡಿಸಿ, ಪ್ರಾದೇಶಿಕ ಜಂಟಿ ನಿರ್ದೇಶಕರ ಮೇಲು ಸಹಿಯೊಂದಿಗೆ ಕಡ್ಡಾಯವಾಗಿ 2022ರ ಏಪ್ರಿಲ್ ಮಾಹೆಯ ಅಂತ್ಯದೊಳಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು.

ಈ ಮೇಲ್ಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿ, ಬಿಡುಗಡೆಯಾದ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಈ ಷರತ್ತುಗಳು ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

(ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಧಾರವಾಡ, ಕಲಬುರ್ಗಿ ಮತ್ತು ಮಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ನೋಡಲ್ ಅಧಿಕಾರಿಗಳು-ರಾಜ್ಯ ಗುಣಮಟ್ಟ ಭರವಸಾ ಕೋಶ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
6. ಮ್ಯಾನೇಜರ್/ಅಧೀಕ್ಷಕರು, ಯೋಜನಾ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು..
7. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
8. ಕಛೇರಿ ಪ್ರತಿ.

Scanned with CamScanner